ಮೂಡಿಗೆರೆ ತಾಲ್ಲೂಕು ಕಳಸಾದಲ್ಲಿ ಮೊಲ ಸಾಕಾಣಿಕೆ ಕೇಂದ್ರ ಸ್ಥಾಪನೆ

2248 - ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ತಾಲ್ಲೂಕು ಕಳಸಾದಲ್ಲಿರುವ ಪಶುಸಂಗೋಪನಾ ಕೇಂದ್ರಕ್ಕೆ ಮೊಲ ಸಾಕಾಣಿಕೆ ಘಟಕ ಮಂಜೂರಾದದ್ದು ಯಾವಾಗ, ಇದರ ಉದ್ದೇಶವೇನು?

ಆ) ಇದಕ್ಕಾಗಿ ಖರ್ಚು ಮಾಡಿದ ಹಣ ಎಷ್ಟು? ಪ್ರತಿ ವರ್ಷದ ಖರ್ಚಿನ ವಿವರ ನೀಡುವುದು?

ಇ) ಈ ಕೇಂದ್ರದಲ್ಲಿ ಮೊಲಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಸರ್ಕಾರ ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಬಸವರಾಜ ಪಾಟೀಲ್ (ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು)

ಅ) ದಿನಾಂಕ 3-4-1988 ರಂದು ಮಂಜೂರು ಮಾಡಲಾಯ್ತು. ಗ್ರಾಮೀಣ ಪ್ರದೇಶಗಳಲ್ಲಿನ ರೈತರಿಗೆ ಮಾಂಸ ಉತ್ಪಾದನೆಯ ಉಪ ಕಸುಬನ್ನು ನೀಡುವ ಉದ್ದೇಶದಿಂದ ಪ್ರಾತ್ಯಾಕ್ಷಿಕ ಕೇಂದ್ರವನ್ನು ಸ್ಥಾಪಸಲಾಗಿದೆ.

ಆ) ಕಳೆದ ಮೂರು ವರ್ಷಗಳಲ್ಲಿ ಖರ್ಚು ಮಾಡಿದ ಒಟ್ಟು ಹಣ:

1988-89 ರೂ. 49,932-00

1989-90- ರೂ. 23,890-00

1990-91- ರೂ. 8,789-00

ಒಟ್ಟು ರೂ. 82,611-00

ಇ) ಹೌದು.

ಈ ತಿಂಗಳಲ್ಲಿ 25 ಮೊಲಗಳನ್ನು ತಂದು ಸಾಕಲು ಕ್ರಮ ತೆಗೆದುಕೊಂಡಿದೆ.

ಮಾನ್ಯ ಅಧ್ಯಕ್ಷರೇ, ಉತ್ತರ ಒದಗಿಸಲಾಗಿದೆ. ಆದರೆ ಮಾನ್ಯ ಸದಸ್ಯರು ಕೇಳಿದ ಪೂರ್ತಿ ಮಾಹಿತಿ ಬಂದಿಲ್ಲ. ಈ ಮೊಲ ಸಾಕಾಣಿಕೆ ಘಟಕಕ್ಕೆ ಖರ್ಚು ಮಾಡಿದ ಹಣವೆಷ್ಟು ಮತ್ತು ಪ್ರತಿ ವರ್ಷ ಖರ್ಚು ಮಾಡಿದ ವಿವರ ಕೇಳಿದ್ದಾರೆ. ಆ ವಿವರ ಬಂದಿಲ್ಲ. ಈಗಾಗಲೇ ಜಿಲ್ಲಾಪರಿಷತ್ ಅಧೀನದಲ್ಲಿದೆ ಆ ಸಂಸ್ಥೆ ಕ್ಲೋಸಾಗಿದೆ. ಒಂದೆರೆಡು ದಿವಸಗಳಲ್ಲಿ ಈ ಒಂದು ಮಾಹಿತಿಯನ್ನು ಮಾನ್ಯ ಸದಸ್ಯರಿಗೆ ಒದಗಿಸುತ್ತೇನೆ.

ಶ್ರೀಮತಿ ಮೋಟಮ್ಮ : ಮಾನ್ಯ ಸಚಿವರು ಉತ್ತರ ಕೊಟ್ಟಿರುವುದರಲ್ಲೇ ಒಂದೆರೆಡು ಕ್ಲಾರಿಫಿಕೇಶನ್ಸ್ ಕೇಳುತ್ತೇನೆ. ನಾನು ಮೂಡಿಗೆರೆ ತಾಲ್ಲೂಕಿನ ಕಳಸದಲ್ಲಿರುವ ಪಶುಸಂಗೋಪನಾ ಕೇಂದ್ರಕ್ಕೆ ಮೊಲ ಸಾಕಾಣಿಕೆ ಘಟಕ ಮಂಜೂರಾದದ್ದು ಯಾವಾಗ? ಇದರ ಉದ್ದೇಶವೇನು ಎಂದು ಕೇಳಿದ್ದೇನೆ. ಮಾನ್ಯ ಮಂತ್ರಿಗಳು 1988 ರಲ್ಲಿ ಮಂಜೂರು ಮಾಡಲಾಗಿದೆಯೆಂದು ಹೇಳಿದ್ದಾರೆ. ಜೊತೆಗೆ ಇದರ ಉದ್ದೇಶ ಒಳ್ಳೆಯದೇ ಇದೆ. ಗ್ರಾಮೀಣ ಪ್ರದೇಶಗಳಲ್ಲಿನ ರೈತರಿಗೆ ಮಾಂಸ ಉತ್ಪಾದನೆಯ ಉಪ ಕಸುಬನ್ನು ನೀಡುವ ಉದ್ದೇಶದಿಂದ ಪ್ರಾಕ್ಯಾಕ್ಷಿಕ ಕೇಂದ್ರವನ್ನು ಸ್ಥಾಪಿಸಲಾಗಿದೆಯೆಂದು ಹೇಳಿದ್ದಾರೆ. ಅದಕ್ಕಾಗಿ ಸುಮಾರು 82,611 ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ ಈಗ ಆ ಕೇಂದ್ರದಲ್ಲಿ ಮೊಲಗಳೇ ಇಲ್ಲ. 82,611 ರೂಪಾಯಿಗಳನ್ನು ಖರ್ಚು ಮಾಡಿದ ಮೇಲೆ ಮೊಲಗಳು ಅಲ್ಲಿರಬೇಕಲ್ಲ. ತಮಗೆ ಗೊತ್ತಿರಬಹುದು ಮೊಲ ಸಾಕಾಣಿಕೆ

ಕೇಂದ್ರ ಒಂದು ತರಹ ಪೌಲ್ಟ್ರಿ ಇರಬಹುದು. ಅಲ್ಲಿ ಹೈಬ್ರಿಡ್ ವೆರೈಟ್‌ಗಳನ್ನು ಸಾಕುತ್ತಾರೆ. ನಾನು ವಿಜಿಟ್ ಮಾಡಿದಾಗ ಅಲ್ಲಿ ರಷ್ಯನ್ ಗ್ರೆ, ನ್ಯೂಜಿಲೆಂಡ್ ವೈಟ್, ಮಲೇನಾಡ್ ಬೂಡ ಎಂದು ಮೂರು ತರಹದ ಮೊಲಗಳನ್ನು ಸಾಕಿದ್ದರು. ಅದು ಬಾರಿ ಚೆನ್ನಾಗಿತ್ತು ಮತ್ತು ಆ ಭಾಗದ ಜನರಿಗೆ ಒಳ್ಳೆಯ ಕಸುಬನ್ನು ಉಂಟುಮಾಡಿತ್ತು ಏಕೆಂದರೆ ನಮ್ಮ ಕಡೆ ಮೊಲ ತಿನ್ನುವವರು ಜಾಸ್ತಿ ಇದ್ದಾರೆ. ನಿಮಗೆ ಗೊತ್ತಿರಬಹುದು, ಹಿಂದೆ ಒಂದು ಸಲ ಯಾರೋ ಮೊಲ ಹೊಡೆದರು ಎಂದು ಅವರಿಗೆ ಶಿಕ್ಷೆಯೇ ಆಗಿತ್ತು. ಆದರೆ ಮೊಲದ ಮಾಂಸ ನಿಜಕ್ಕೂ ಆರೋಗ್ಯಕ್ಕೆ ಒಳ್ಳೆಯದು. ಇಂತಹ ಸಂದರ್ಭದಲ್ಲಿ ರೈತರಿಗೆ ಉಪಕಸುಬಾಗಿ, ಜೊತೆಗೆ ಮಾಂಸ ತಿನ್ನುವವರಿಗೆ ಆರೋಗ್ಯಕ್ಕೆ ಒಳ್ಳೆಯದೂ ಆಗಿರುವಾಗ ಆ ಘಟಕ ನಿಲ್ಲುವುದಕ್ಕೆ ಕಾರಣವೇನು?

ಶ್ರೀ ಬಸವರಾಜ್ ಪಾಟೀಲ್ : ಅಲ್ಲಿ ಮೊಲಗಳು ಇರಲಿಕ್ಕೆ ಕಟ್ಟಡ ಇರಲಿಲ್ಲ ಮತ್ತು ಮೇವಿನ ಅಭಾವ ಬಹಳವಾಗಿತ್ತು ಅದರಲ್ಲಿ ಎಷ್ಟು ಮೊಲಗಳನ್ನು ತೆಗೆದುಕೊಂಡಿದ್ದರು ಎಂದು ಡೀಟೇಲಾಗಿ ಕೊಟ್ಟಿಲ್ಲ. ಬರೀ 86 ಸಾವಿರ ರೂಪಾಯಿಗಳು ಮೊಲಗಳಿಗಾಗಿ ಖರ್ಚಾಗಿದೆ ಎಂದು ಕೊಟ್ಟಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಈಗ ಅಲ್ಲಿ ಮೊಲಗಳಾವುವೂ ಇಲ್ಲ. ಹೊಸದಾಗಿ ಯೋಜನೆ ಹಾಕಿಕೊಂಡು ಈ ವರ್ಷದಿಂದ ಪ್ರಾರಂಭ ಮಾಡುತ್ತೇವೆ.

ಶ್ರೀಮತಿ ಮೋಟಮ್ಮ : ಏನಾಗಿದೆ ಎಂದರೆ ಅಲ್ಲಿದ್ದ ಮೊಲುಗಳು ಏನಾದುವು? ಅಲ್ಲಿದ್ದ ಡಾಕ್ಟರುಗಳು ಏನಾದರೂ ತಿಂದರೋ? ಅಥವಾ ಇದ್ದ ಮೊಲಗಳಾದರೂ ಉಳಿಬೇಕಲ್ಲ ಅಥವಾ ಎಷ್ಟು ಜನ ರೈತರಿಗೆ ಕೊಟ್ಟಿದ್ದಾರೆ? 1990-91 ರಲ್ಲಿ ಬರೀ 8 ಸಾವಿರ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಅಲ್ಲಿ ಇದ್ದ ಡಾಕ್ಟರಿಗೆ ಆ ಒಂದು ಕೇಂದ್ರವನ್ನು ಅಭಿವೃದ್ಧಿ ಪಡಿಸುವುದಕ್ಕೆ ಇಚ್ಛೆ ಇರಲಿಲ್ಲ ಎಂದು ಕಾಣುತ್ತದೆ. ಹಾಗಾಗಿ ಆ ಮನುಷ್ಯನೇ ಈ ಒಂದು ಮೊಲ ಸಾಕಾಣಿಕೆ ಕೇಂದ್ರ ಹಾಳಾಗಿರುವುದಕ್ಕೆ ಮುಖ್ಯವಾಗಿ ಕಾರಣನಾಗಿರುತ್ತಾನೆ. ಆ ಕಾಲದಲ್ಲಿ ಯಾವ ಡಾಕ್ಟರು ಇದ್ದರು. ಈ ಮೂಲ ಸಾಗಾಣಿಕೆ ಕೇಂದ್ರ ನಿಂತು ಹೋಗುವುದಕ್ಕೆ ಯಾರು ಕಾರಣರಾಗಿದ್ದಾರೆ, ಅಂಥವರ ಬಗ್ಗೆ ಸೀರಿಯಸ್ ಆಗಿ ಕ್ರಮವನ್ನು ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ್ ಪಾಟೀಲ್: ಮಾನ್ಯ ಸದಸ್ಯರು ಹೇಳಿದ ಪ್ರಕಾರ, ಈಗಾಗಲೇ 1989-90 ಹಾಗೂ 1990-91 ರಲ್ಲಿ ಈ ಕೇಂದ್ರದಿಂದ ಒಟ್ಟು 250 ಮೊಲದ ಮರಿಗಳನ್ನು ರೈತರಿಗೆ ಸರಬರಾಜು ಮಾಡಲಾಗಿದೆ, ಕೊಟ್ಟಿದ್ದಾರೆ. ಆದರೂ ಈಗ ಮಾನ್ಯ ಸದಸ್ಯರು ಹೇಳಿದ ಪ್ರಕಾರ ಅಲ್ಲಿರತಕ್ಕಂಥ ಡಾಕ್ಟರುಗಳಾಗಿಲಿ, ಯಾವುದೇ ಅಧಿಕಾರಿಗಳಾಗಲಿ ಅದರಲ್ಲಿ ದುರುಪಯೋಗ ಮಾಡಿದ್ದಾರೆ ಎಂದು ಕಂಡುಬಂದರೆ ಆದಷ್ಟು ಬೇಗ ಅವರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಬೈಲಹೊಂಗಲ ತಾಲೂಕಿನ ಕುಲವಳಿ ಗ್ರಾಮದ ರೈತರುಗಳಿಗೆ ತೊಂದರೆ

2303 - ಶ್ರೀ ಬಾಬುಗೌಡ ಪಾಟೀಲ, (ಕಿತ್ತೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೈಲಹೊಂಗಲ ತಾಲ್ಲೂಕಿನ ಕುಲವಳಿ ಗ್ರಾಮದ (ಸರಹದ್ದಿನಲ್ಲಿರುವ) ಸುಮಾರು 6,000 ಎಕರೆ ಜಮೀನಿಗೆ ಸಂಬಂಧಿಸಿದಂತೆ ಸಾವಿರಾರು ರೈತರ ಜಮೀನಿನ ರೈತ ಹಕ್ಕು ಇತ್ತೀಚೆಗೆ ಉಚ್ಚ ನ್ಯಾಯಾಲಯದ ಆದೇಶದ ಮೂಲಕ ನಷ್ಟವಾಗುತ್ತದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?